ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ರಾಜ್ಯದಲ್ಲಿ ಪ್ರತಿ ವರ್ಷ ಎಷ್ಟು ಬೆಲೆಯ ಖಾದಿ ಬಟ್ಟೆ ಉತ್ಪನ್ನ ಮಾಡಲ್ಪಡುತ್ತದೆ.

ಆ ಪ್ರತಿ ವರ್ಷ ಹೊರ ರಾಜ್ಯಗಳಿಂದ ರಫ್ತು ಮಾಡಲ್ಪಡುವ ಖಾದಿ ಬಟ್ಟೆಯ ಸರಾಸರಿ ಅಂದಾಜು ಬೆಲೆ ಏನು ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ ರಾಜ್ಯದಲ್ಲಿ ಪ್ರತಿ ವರ್ಷ ಸುಮಾರು 13.40 ಕೋಟಿ ರೂ.ಗಳ ಮೌಲ್ಯದ ಖಾದಿ ಬಟ್ಟೆ ಉತ್ಪನ್ನವಾಗುವುದು?

1.	ಅರಳೆ ಖಾದಿ	7.00 ಕೋಟಿ ರೂ.
2.	ಉಣ್ಣೆ ಖಾದಿ	2.80 ಕೋಟಿ ರೂ.
3.	ರೇಷ್ಮೆ ಖಾದಿ	3.60 ಕೋಟಿ ರೂ.
	ಒಟ್ಟು	13.40 ಕೋಟಿ ರೂ.

ಆ ಪ್ರತಿ ವರ್ಷ ಹೊರ ರಾಜ್ಯಗಳಿಗೆ ಸುಮಾರು 6.35 ಕೋಟಿ ರೂ ಗಳ ಖಾದಿ ಬಟ್ಟೆ ರಫ್ತು ಮಾಡಲ್ಪಡುತ್ತದೆ.

ವಿಷಯ :- ಆಡಳಿತ ಮಂಡಳಿಯಲ್ಲಿ ಹರಿಜನ ಗಿರಿಜನರಿಗೆ ಅವಕಾಶ ಕೊಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1583 (2313)

ಶ್ರೀ ಕರಿಯಣ್ಣ (ಹೊಳೇ ಹೊನ್ನೂರು):- ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಸರ್ಕಾರದ ಸ್ವಾಮ್ಯದಲ್ಲಿರುವ ಎಲ್ಲಾ ಕಾರ್ಖಾನೆಗಳ ಆಡಳಿತದಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಲು ಹರಿಜನ ಗಿರಿಜನರಿಗೆ ಅವಕಾಶ ಮಾಡಿಕೊಡಲಾಗಿದೆಯೇ (ಹಾಗಿದ್ದಲ್ಲಿ ವಿವರವನ್ನು ನೀಡುವುದು)

ಆ ಇಲ್ಲಿದಿದ್ದರೆ, ಹರಿಜನ ಗಿರಿಜನರಿಗೆ ಬೇರೆ ಯಾವ ರೀತಿಯ ನ್ಯಾಯಯುತವಾದ ಸೇವೆಯನ್ನು ಸಲ್ಲಿಸಲು ಈ ಕಾರ್ಖಾನೆಗಳ ಆಡಳಿತದಲ್ಲಿ ಅವಕಾಶ ಮಾಡಿ ಕೊಡಲಾಗಿದೆ. (ವಿವರಗಳನ್ನು ಒದಗಿಸುವುದು)

ಇ ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲದಿದ್ದರೆ ಸರ್ಕಾರ ಕಾನೂನು ಬದಲಾಯಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ 18ಕಂಪನಿಗಳಲ್ಲಿ ಅವಕಾಶ ಮಾಡಿ ಕೊಡಲಾಗಿದೆ. ವಿವರಗಳನ್ನೊಳಗೊಂಡ ಪಟ್ಟಿ ಲಗತ್ತಿಸಿದೆ.

ಆ ಪ್ರಶ್ನೆ (ಅ)ಗೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ ಈ ಬಗ್ಗೆ ಕಾನೂನಿನ ತೊಡಕು ಇರುವುದಿಲ್ಲ.

STATEMENT SHOWING THE DETAILS OF THE SC/ST DIRECTORS ON THE BOARD OF DIRECTORS OF THE COMPANIES AND CORPORATIONS COMMING UNDER THE ADMINISTRATIVE CONTROL OF COMMERCE AND INDUSTRIES DEPARTMENT.

Sl. N0.	Name of the company/ Corporation	Name of the Director	SC/ST
1.	Hutti Gold Mines Limited	Sri. G.Muniyappa, IAS, Director	SC
2.	New Government Electrical Factory Ltd.,	Sri. P.Narasimhamurthy, Director	SC
3.	Mysore Minerals Ltd.,	Sri. G.Muniyappa, IAS Director.	SC
4.	Mysore Sugar Co. Ltd.,	Sri. Bettaveeriah Director	SC
5.	Mysore Paints and Varnishes Ltd.,	Sri. Narasimaiah, Director	SC
6.	Mysore Chrome Taning Co. Ltd,.	1. Sri. R. Basavaraj, Director 2. Sri. Narasaish, Director	SC SC
7.	Karnataka State Handi-Crafts Development Corporation Ltd.,	Sri. S.Swatantra Rao, IAS, Director	SC SC
8.	Karnataka Vidyuth Karkhane Ltd.,	1. Sri. P.Narasimha Murthy Director 2. Sri. Narasaiah, Director	SC SC
9.	Karnataka Handloom Development Corporation Ltd,	1. Sri. H.Basavaiah, IAS Chairman & Managing Director 2. Sri. M. Eraiah, Director 3. Sri. N.Gokul Ram, Director	SC SC SC
10.	KEONICS	Sri. S.Swatantra Rao, IAS Director	SC
11.	Chamundi Machine Tools Ltd.,	1. Sri. Narasaiah, Director 2. Sri. Venkataramanappa Director	SC SC

12.	Karnataka Leather Industries Development Corporation Ltd., (LIDKAR)	1. Sri. S.Swathantra Rao, IAS, Chairman	SC
		2. Sri. R.Basavaraju, M.D.	SC
13.	Mysore Paper Mills Ltd.,	1. Sri. Gopal Reddy, IAS Chairman & Managing Director	SC
		2. Sri. Muniyappa, Director	SC
14.	Mysore Electricals Ltd.,	Sri. S.Swatantra Rao, IAS, Director	SC
15.	Mysore Acetate Co., Ltd.,	Sri. S.Swatantra Rao, IAS, Director	SC
16.	Mysore Lamp Works Ltd.,	1. Sri. C.Muniswamy, IAS, Chairman	SC
		2. Sri. Subhir Hari Singh, IAS Managing Director	SC
		3. Sri. P.Narasimhamurthy Director	SC
		4. Sri. S.Swatantra Rao, IAS	SC
17.	K S T(P) Ltd.,	1. Sri. Gokulam, Chairman	SC
		2. Sri. M.Eraiah, Director	SC
		3. Sri. H.Hanumantharaya Managing Director. I.C	SC
18.	Karnataka Small Industries Marketing Corporation. Ltd.,	Sri. E. Venkataiah, Director	SC

ವಿಷಯ:- ಹರಿಜನ ಗಿರಿಜನ ಮೀಸಲಾತಿಯನ್ನು ಕೈಗಾರಿಕೆಗಳಲ್ಲಿ ಕಾಪಾಡುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1584 (2314)

ಶ್ರೀ ಕರಿಯಣ್ಣ (ಹೊಳೆ ಹೊನ್ನೂರು):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಸರ್ಕಾರಿ ಸ್ವಾಮ್ಯದ ಕೆಲವು ಕೈಗಾರಿಕೆಗಳನ್ನು ಮಾರಾಟ ಮಾಡುತ್ತಿರುವುದರಿಂದ ಇಲ್ಲಿ ಕೆಲಸ ಮಾಡುತ್ತಿರುವ ಹರಿಜನ ಗಿರಿಜನರಿಗೆ ಮೀಸಲಾತಿಯಿಂದ ಸಿಗುತ್ತಿದ್ದ ಸಾಮಾಜಿಕ ನ್ಯಾಯಕ್ಕೆ ಅನ್ಯಾಯವಾಗುವುದಿಲ್ಲವೆ?

ಆ ಹರಿಜನ ಗಿರಿಜನರಿಗೆ ಇದರಿಂದ ಆಗುವ ಅನ್ಯಾಯ , ಸರ್ಕಾರದಿಂದ ಯಾವ ರೀತಿಯ ಪರಿಹಾರವನ್ನು